ಓ.ಎಸ್. 219/2012

ಪಿಡಬ್ಲ್ಯೂ-1

<u>ಸಾಕ್ಷಿಯನ್ನು ದಿನಾಂಕ 17.12.2018 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ 4, 8, 9 ಮತ್ತು 12ರವರ ಪರ ಶ್ರೀ ಬಿ.ಆರ್.ಆರ್. ವಕೀಲರಿಂದ.**

ಮುದ್ದರಾಮಕ್ಕನ ತಾಯಿಯ ತಂದೆಗೆ ಗಂಡು ಮಕ್ಕಳು ಇಲ್ಲದ ಕಾರಣ ಆಕೆ ತಂದೆ ಆಸ್ತಿಗಳನ್ನು ಮುದ್ದರಾಮಕ್ಕ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಸದರಿ ಮುದ್ದರಾಮಕ್ಕನ ತಾಯಿಯವರ ತಂದೆಗೆ 3 ಜನ ಹೆಣ್ಣು ಮಕ್ಕಳು , 3 ಜನ ಹೆಣ್ಣು ಮಕ್ಕಳು ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು. ಸದರಿ ಆಸ್ತಿಗಳು ತೋಟದ ಆಸ್ತಿಗಳಾಗಿತ್ತು ಎಂದರೆ ನನಗೆ ತಿಳಿದಿಲ್ಲ, ಮುದ್ದರಾಮಕ್ಕನಿಗೆ ತಾಯಿಯ ತಂದೆ ಮನೆ ಆಸ್ತಿಗಳಿಂದ ಆದಾಯವಿತ್ತು ಅದರಲ್ಲಿ ತನ್ನದೇ ವ್ಯವಹಾರ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮುದ್ದರಾಮಕ್ಕನವರ ತಾಯಿಯ ತಂದೆ ರಂಗದಾಸಪ್ಪ ಸಾಯುವ ಕಾಲಕ್ಕೆ ಮುದ್ದರಾಮಕ್ಕ ವಯಸ್ಕರಾಗಿದ್ದರು.

ಚಿಕ್ಕಲಕ್ಷ್ಮಮ್ಮನ ಮದುವೆ ಕಾಲಕ್ಕೆ ನಾವು ಭೋಗ್ಯ ಮಾಡಿದ್ದೇವು ಎಂದು ಹೇಳಲಾದ ವ್ಯವಹಾರವನ್ನು ನನ್ನ ಅಣ್ಣ 4ನೇ ಪ್ರತಿವಾದಿ ಮಾಡಿದ್ದು, ಪತ್ರಕ್ಕೆ ಮಾತ್ರ ನಾನು, 6ನೇ ಪ್ರತಿವಾದಿ, 1ನೇ ಪ್ರತಿವಾದಿ ಮತ್ತು 4ನೇ ಪ್ರತಿವಾದಿ ಸಹಿ ಮಾಡಿರುತ್ತೇವೆ. ಸದರಿ ಭೋಗ್ಯದ ದಾಖಲೆ ಭೋಗ್ಯ ಪಡೆದುಕೊಂಡಿದ್ದ ಗಂಗಪ್ಪನವರ ಬಳಿ ಇರುತ್ತದೆ, ಅದು ನೊಂದಣಿ ಆದ ದಾಖಲೆಯಾಗಿರುವುದಿಲ್ಲ, ನಾನು ಹೇಳುವಂತೆ 4ನೆ ಪ್ರತಿವಾದಿ ಭೋಗ್ಯದ ವ್ಯವಹಾರಕ್ಕೆ ಸೇರಿ ಸಹಿ ಮಾಡಿದ್ದರು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ನಿಪಿ-30ರ ಪ್ಯಾರಾ ಸಂಖ್ಯೆ 9(ಎ) ರಿಂದ (ಡಿ) ರಲ್ಲಿರುವ ವಿಷಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ನಮ್ಮ ವಕೀಲರು ವಾದ ಪತ್ರದಲ್ಲಿ ಸೇರಿಸುವ ಅವಶ್ಯಕತೆ ಇಲ್ಲ ಸಾಕ್ಷಿ ವಿಚಾರಣೆಯಲ್ಲಿ ಅಥವಾ ವಾದ ಮಂಡನೆ ಕಾಲಕ್ಕೆ ಮಂಡಿಸಬಹುದು ಎಂದು ಹೇಳಿದ ಕಾರಣ ಸೇರಿಸಿರುವುದಿಲ್ಲ, ಸದರಿ ಪ್ಯಾರಾ 9(ಎ) ರಿಂದ (ಡಿ) ರವರೆಗಿನ ವಿಚಾರಗಳು ಸುಳ್ಳಿನಿಂದ ಕೂಡಿದ ಕಾರಣ ಈ ದಾವೆಗೆ ಸೇರಿಸಿಲ್ಲ ಎಂದರೆ ಸರಿಯಲ್ಲ.

2ನೇ ವಾದಿ ಬೆಂಗಳೂರಿನ ಅಂಜನಾನಗರದ ವಾಸಿ ಎಂದರೆ ಸರಿಯಲ್ಲ, 2ನೇ ವಾದಿ ಬೆಂಗಳೂರಿನಲ್ಲಿ ಯಾವತ್ತೂ ವಾಸ ಇರುವುದಿಲ್ಲ, 2ನೇ ವಾದಿಗೆ ವಾದ ಪತ್ರದಲ್ಲಿ ತೋರಿಸಿದ ವಿಳಾಸದ ವಾಸ ಸ್ಥಳ ಪತ್ರ ಹೊರತುಪಡಿಸಿ ಬೇರೆ ವಿಳಾಸದಲ್ಲಿ ವಾಸವಿರುವ ಬಗ್ಗೆ ಯಾವುದೇ

ದಾಖಲೆ ಲಭ್ಯವಿರುವುದಿಲ್ಲ, 2ನೇ ವಾದಿ ತಾನು ಇಷ್ಟಪಟ್ಟಿದ್ದ ಹುಡುಗಿಯನ್ನು ಮನೆಯವರ ಅನುಮತಿ ಪಡೆದು ಮದುವೆಯಾಗಿರುತ್ತಾರೆ, 2ನೇ ವಾದಿಯ ಮತದಾರಯಾದಿ ಚಿಕ್ಕಮಳಲವಾಡಿ ಗ್ರಾಮದಲ್ಲಿಯೇ ಇರುತ್ತದೆ. 2ನೇ ವಾದಿ ತನ್ನ ಇಚ್ಚೆಯಂತೆ ಇಷ್ಟಪಟ್ಟ ಹುಡುಗಿಯೊಂದಿಗೆ ಮನೆಯವರಿಂದ ದೂರ ಹೋಗಿ ಮದುವೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ, 2ನೇ ವಾದಿಯ ಹೆಂಡತಿ ಹೆಸರು ಚಿಕ್ಕತಾಯಮ್ಮ, ಸಾಕ್ಷಿಗೆ ಯಶವಂತಪುರ ವಿಧಾನಸಭಾ ಕ್ಷೇತ್ರದ ಮತದಾರ ಪಟ್ಟಿ ಭಾಗದ ಸಂಖ್ಯೆ 102ರ ವಾರ್ಡ್ ಸಂಖ್ಯೆ-72ರಲ್ಲಿ ಕ್ರಮ ಸಂಖ್ಯೆ 330ರ ಚಿಕ್ಕತಾಯಮ್ಮ ಕೋಂ ಕಪನಯ್ಯ ಇದರ ದಾಖಲೆ ತೋರಿಸಿ ಸದರಿಯವರು 2ನೇ ವಾದಿಯ ಹೆಂಡತಿ ಎಂದು ಸೂಚಿಸಿದ್ದು ಸಾಕ್ಷಿ ಹೌದು ಎಂದು ಒಪ್ಪಿಕೊಂಡ ಕಾರಣ ಸದರಿ ಮತದಾರರ ಯಾದಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಚಿಕ್ಕತಾಯಮ್ಮನವರ ಹೆಸರಿನ ಭಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಚಿಕ್ಕಮಳಲವಾಡಿ ಮತದಾರ ಯಾದಿಯಲ್ಲಿ 2ನೇ ವಾದಿಯ ಹೆಸರನ್ನು ಸೇರಿಸಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ, 1ನೇ ವಾದಿಯ ಹೆಸರಿಗೆ ನಂ-78, 15ನೇ ಮುಖ್ಯ ರಸ್ತೆ, ರಾಘವೇಂದ್ರ ಬ್ಲಾಕ್, ಶ್ರೀನಗರ, ಬೆಂಗಳೂರು 57 ವಿಳಾಸಕ್ಕೆ ಪತ್ರ ಕಳುಹಿಸಿದ್ದಲ್ಲಿ ತಲಪುತ್ತದಾ ಎಂದರೆ ಸಾಕ್ಷಿ ವಾದಿ ಹೆಸರಿಗೆ ಕಳುಹಿಸಿದರೆ ಜಾರಿಯಾಗುವುದಿಲ್ಲ ಸದರಿ ವಿಳಾಸದಲ್ಲಿ ಅವರ ಮಕ್ಕಳು ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಳಾಸದಲ್ಲಿರುವ ಮನೆ 1ನೇ ವಾದಿಯ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿರುವ ಸ್ವಂತ ಮನೆಯಾಗಿರುತ್ತದೆ. 1ನೇ ವಾದಿಯ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ಸದರಿ ವಿಳಾಸದಲ್ಲಿ ಮನೆ ಇರುವ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ, ಸದರಿ ಮನೆಯನ್ನು ಕಟ್ಟಿ ಸುಮಾರು 10 ರಿಂದ 12 ವರ್ಷಗಳಾಗಿರುತ್ತವೆ. ಸದರಿ ಮನೆಗೆ ಗೃಹ ಪ್ರವೇಶ ಕಾರ್ಯಕ್ರಮವನ್ನು ಮಾಡಲಾಗಿತ್ತು, ಸದರಿ ಕಾರ್ಯಕ್ರಮಕ್ಕೆ ನಾನು ಸಹ ಹಾಜರಿದ್ದೆ, ಸದರಿ ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಗೃಹ ಪ್ರವೇಶದ ಆಮಂತ್ರಣ ಪತ್ರಿಕೆಯನ್ನು ಅಚ್ಚು ಹಾಕಿಸಲಾಗಿತ್ತು, ಸದರಿ ಆಮಂತ್ರಣ ಪತ್ರಿಕೆಯನ್ನು ನಾನು ನೋಡಿರುತ್ತೇನೆ ಆದರೆ ಈಗ ನನಗೆ ನೆನಪಿಲ್ಲ, ಸದರಿ ಆಮಂತ್ರಣ ಪತ್ರಿಕೆಯಲ್ಲಿ 1ನೇ ವಾದಿ ತಾನು ನಿರ್ಮಿಸಿರುವ ಮನೆಯ ಗೃಹ ಪ್ರವೇಶಕ್ಕೆ ಆಗಮಿಸಬೇಕೆಂದು ಅಚ್ಚು ಹಾಕಿಸಿದ್ದರು ಎಂದರೆ ಇರಬಹುದು. ಸಾಕ್ಷಿಗೆ ಒಂದು ಛಾಯ ಚಿತ್ರವನ್ನು ತೋರಿಸಿ ಅದಲ್ಲಿರುವ ವ್ಯಕ್ತಿಯನ್ನು ಗುರ್ತಿಸಲು ತೋರಿಸಿದ್ದು ಅದರಲ್ಲಿ ನೀಲಿ ಅಂಗಿ ತೊಟ್ಟ ವ್ಯಕ್ತಿ ತನ್ನ ಅಣ್ಣ 4ನೇ ಪ್ರತಿವಾದಿ ಎಂದು ಗುರ್ತಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಛಾಯ ಚಿತ್ರವನ್ನು ತೋರಿಸಿ ಸದರಿ ಛಾಯ ಚಿತ್ರದಲ್ಲಿ ಒಂದು ಕಾಫಿ ಬಣ್ಣದ ಶರ್ಟ್ ತೊಟ್ಟು ಕುಳಿತ ಬಂಗಿಯಲ್ಲಿರುವ ವ್ಯಕ್ತಿ 2ನೇ ವಾದಿ ಇರುತ್ತಾರೆ ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಯಿತು.

ಓ.ಎಸ್. 219/2012
ಪಿಡಬ್ಲ್ಯೂ-1

4ನೇ ಪ್ರತಿವಾದಿ ಕೆಎಸ್ಆರ್‌ಟಿಸಿ ಕಂಡಕ್ಟರ್ ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರಥಮ ಚಿಕಿತ್ಸೆ ತರಬೇಟಿ ಪ್ರಮಾಣ ಪತ್ರ ಸಹ ಪಡೆದುಕೊಂಡಿದ್ದರು ಈಗ ನನಗೆ ತೋರಿಸಿದ ದಾಖಲೆ ಸದರಿ ದಾಖಲೆಯಾಗಿದೆ ಎಂದರೆ ಸರಿ, ಸದರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು. ಸದರಿ ತರಬೇತಿಯನ್ನು ಹಾಸನದಲ್ಲಿ ವಾಸ ಇದ್ದ ಕಾಲಕ್ಕೆ ಹಾಸನದಲ್ಲಿಯೇ ಮಾಡಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆ ಕಾಲಕ್ಕೆ 4ನೇ ಪ್ರತಿವಾದಿ ಹಾಸನದ ಕ್ಯಾಷಿನೋ ಬಾರ್‌ನಲ್ಲಿ ಕೆಲಸ ಮಾಡುತ್ತಾ ಅಲ್ಲಿಯೇ ಇದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಹಾಸನದಲ್ಲಿಯೇ ಕಂಡಕ್ಟರ್ ಲೈಸನ್ ಸಹ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿ ಹಾಸನದ ಕ್ಯಾಷಿನೋ ಬಾರ್‌ನಲ್ಲಿ ಕೆಲಸ ಮಾಡುತ್ತಾ ಅಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. ಯಾವತ್ತೂ ಒಟ್ಟು ಕುಟುಂಬದ ಯಜಮಾನಿಕೆ ಮಾಡಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಹಾಸನದಲ್ಲಿ ವಾಸವಾಗಿದ್ದರು ಎಂದು ಒಪ್ಪಿಕೊಂಡಲ್ಲ ಪ್ರಕರಣ ತೊಂದರೆಯಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. 01/06/1984 ರಿಂದ 19 ವರ್ಷಗಳ ಕಾಲ ಹಾಸನದ ಕ್ಯಾಷಿನಿಯೋ ಬಾರ್‌ನಲ್ಲಿ ಕೆಲಸಗಾರನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಸದರಿ ಬಾರ್‌ನ ಮಾಲೀಕರು ದೃಢೀಕರಣ ಪತ್ರ ಸಹ ನೀಡಿದ್ದಾರೆ ಎಂದರೆ ಸರಿಯಲ್ಲ. ಹಾಸನದಲ್ಲಿ ಕೆಲಸಮಾಡುತ್ತಾ ಕೆಎಸ್ಆರ್‌ಟಿಸಿ ಕಂಡಕ್ಟರ್ ಮತ್ತು ಇತರೆ ಹುದ್ದೆಗಳಿಗೆ ಪ್ರಯತ್ನಿಸುತ್ತಿದ್ದ ಕಾರಣ ಸರ್ಕಾರಿ ಪತ್ರಗಳು ಹಾಸನ ವಿಳಾಸಕ್ಕೆ ಜಾರಿಯಾಗುತ್ತಿದ್ದವು ಎಂದರೆ ಸರಿಯಲ್ಲ.

ದಾವಾ ಷೆಡ್ಯೂಲ್ 15 ಮತ್ತು 18ನೇ ಆಸ್ತಿಗಳನ್ನು 4ನೇ ಪ್ರತಿವಾದಿ ಹಾಸನದ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಪಡೆದ ಆದಾಯದಿಂದ ಖರೀದಿ ಮಾಡಿದ ಆತನ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 15 ಮತ್ತು 18ನೇ ಆಸ್ತಿಗಳ ಕ್ರಯದ ವ್ಯವಹಾರ ಎಲ್ಲಿ ಮತ್ತು ಯಾವಾಗ ಆಗಿದೆ ನನಗೆ ತಿಳಿದಿಲ್ಲ ಕಾರಣ 4ನೇ ಪ್ರತಿವಾದಿಯೇ ಮುಖ್ಯಸ್ಥನಾದ ಕಾರಣ ಅವರೇ ಮುಂದೆ ನಿಂತು ಮಾಡಿಸಿರುತ್ತಾರೆ. ಸಾಕ್ಷಿಗೆ ಒಂದು ಕುಣಿಗಲ್ ವಿಧಾನ ಸಭಾ ಕ್ಷೇತ್ರದ ಭಾಗದ ಸಂಖ್ಯೆ -81 ವಾಡ್ ಸಂಖ್ಯೆ-18ರ ಮತದಾರರ ಯಾದಿಯನ್ನು ತೋರಿಸಿದ್ದು ಸದರಿ ಯಾದಿಯಲ್ಲಿ ನಿಮ್ಮ ಮತ್ತು ನಿಮ್ಮ ಪತ್ನಿಯವರ ಹೆಸರು ಇದೆ ಎಂದು ಸೂಚಿಸಿದ್ದು ಸಾಕ್ಷಿ ಹೌದು ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ-5 ಎಂದು ಗುರುತಿಸಲಾಯಿತು, ಸದರಿ ಯಾದಿಯಲ್ಲಿ ಕ್ರಯ ಸಂಖ್ಯೆ -567 ಮತ್ತು 568ರ ಸಾಕ್ಷಿ ಮತ್ತು ಸಾಕ್ಷಿ ಹೆಂಡತಿಯ ಹೆಸರನ್ನು ನಿಡಿ-5(ಎ) ಎಂದು ಗುರುತಿಸಲಾಯಿತು. ಸದರಿ ವಿಳಾಸದಲ್ಲಿ ಸುಮಾರು 7-8 ವರ್ಷಗಳಿಂದ ವಾಸವಾಗಿರುತ್ತೇನೆ, ನಾನು ನನ್ನ ವಾದ ಪತ್ರದಲ್ಲಿ ಸದರಿ ವಿಳಾಸವನ್ನು ತೋರಿಸಿಲ್ಲ ಎಂದರೆ ಸರಿ.

ಓ.ಎಸ್. 219/2012

ಪಿಡಬ್ಲ್ಯೂ-1

ಸಾಕ್ಷಿಗೆ ತುಮಕೂರು ಗ್ರಾಮಾಂತರ ವಿಧಾನ ಸಭಾ ಕ್ಷೇತ್ರ ಭಾಗದ ಸಂಖ್ಯೆ 131 ರಂಗನಾಥಪುರದ ಮತದಾರರ ಪಟ್ಟಿಯನ್ನು ತೋರಿಸಿ ಅದರಲ್ಲಿ 2ನೇ ಪ್ರತಿವಾದಿಯ ಹೆಸರು ಇದೆ ಎಂದು ಸೂಚಿಸಿದ್ದು ಸಾಕ್ಷಿ ಹೌದು ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ-6 ಎಂದು ಗುರುತಿಸಲಾಯಿತು, ಸದರಿ ಮತದಾರರ ಪಟ್ಟಿಯ ಕ್ರಮ ಸಂಖ್ಯೆ -641ರ 2ನೇ ಪ್ರತಿವಾದಿಯ ಹೆಸರನ್ನು ನಿಡಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಉತ್ತರಹಳ್ಳಿ ವಿಧಾನಾ ಸಭಾ ಕ್ಷೇತ್ರ ಭಾಗದ ಸಂಖ್ಯೆ 415ರ 2002ರ ಮತದಾರ ಪಟ್ಟಿಯಲ್ಲಿ ಪ್ರತಿವಾದಿ 6 ಮತ್ತು 8 ರವರ ಹೆಸರು ಇದೆ ಎಂದು ಸೂಚಿಸಿದ್ದು ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ-7 ಎಂದು ಗುರುತಿಸಲಾಯಿತು, ಸದರಿ ದಾಖಲೆಯ ಕ್ರಮ ಸಂಖ್ಯೆ 838 ಮತ್ತು 838ರ 6 ಮತ್ತು 8ನೇ ಪ್ರತಿವಾದಿಗಳ ಹೆಸರನ್ನು ನಿಡಿ-7(ಎ) ಎಂದು ಗುರುತಿಸಲಾಯಿತು.

ದಾವಾ ಷೆಡ್ಯೂಲ್ 13ನೇ ಆಸ್ತಿಗೆ ನನ್ನ ತಂದೆ ಇದ್ದಾಗಲೇ ವಿದ್ಯುತ್‌ಚಕ್ತಿ ಸಂಪರ್ಕ ಪಡೆಯಲಾಗಿತ್ತು. ನಿಪಿ-59 ದಾವಾ ಷೆಡ್ಯೂಲ್-13ನೇ ಆಸ್ತಿಗೆ ಸಂಬಧಿಸಿದ್ದು ಆಗಿರುತ್ತದೆ, ದಾವಾ ಷೆಡ್ಯೂಲ್ 13ರಲ್ಲಿ ಮನೆಯನ್ನು 1990-91ನೇ ಸಾಲಿನಲ್ಲಿ ಕಟ್ಟಲಾಗಿರುತ್ತದೆ. ಸದರಿ ಸ್ವತ್ತಿಗೆ ಮನೆ ಕಟ್ಟಿದ ಕಾಲಕ್ಕೆ ನನ್ನ ತಂದೆ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಪಡೆದಿರಬಹುದು. ಇಂದಿಗೂ ಸದರಿ ಮನೆಯ ವಿದ್ಯುತ್ ಚಕ್ತಿ ಬಿಲ್ ನನ್ನ ತಂದೆ ಕಪ್ಪಣ್ಣಗೌಡರ ಹೆಸರಿನಲ್ಲಿದೆ ಎಂದರೆ ಸರಿ.

ದಾವಾ ಷೆಡ್ಯೂಲ್ 12 ಮತ್ತು 16ನೇ ಆಸ್ತಿಗಳು 8ನೇ ಪ್ರತಿವಾದಿ ತನ್ನ ಸ್ವಯಾರ್ಜಿತ ಸಂಪಾದನೆಯಿಂದ ತನ್ನ ಮೈನರ್ ಮಗ 9ನೇ ಪ್ರತಿವಾದಿ ಪರವಾಗಿ ಖರೀದಿಸಿದ ಆಸ್ತಿಗಳನ್ನು ಉದ್ದೇಶಪೂರ್ವಕವಾಗಿ ದಾವೆಗೆ ಸೇರಿಸಿದ್ದೇನೆ ಎಂದರೆ ಸರಿಯಲ್ಲ, 4ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ದುಡಿದ ಖರೀದಿಸಿದ ಆಸ್ತಿಗಳನ್ನು ಸೇರಿಸಿ ದುರುದ್ದೇಶದಿಂದ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ, ದಾವಾ ಷೆಡ್ಯೂಲ್ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿ ಇರುವುದಿಲ್ಲ ನನಗೆ ಯಾವುದೇ ಹಿಸ್ಸೆ ಸಹ ಇರುವುದಿಲ್ಲ ಎಂದರೆ ಸರಿಯಲ್ಲ, ಸತ್ಯ ಸಂಗತಿಗಳು ಮರೆಮಾಚಿ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

7 ಮತ್ತು 11ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು , ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ

ಕುಣಿಗಲ್.